ಉಪನಿಷತ್ತುಗಳು ಸಾರುವಂತೆಯೇ ಸ್ವಾಮೀಜಿ ಮತ್ತೂ ಹೀಗೆ ಹೇಳುತ್ತಾರೆ: "ಒಂದೇ ಅಗ್ನಿಯು ಇಡೀ ವಿಶ್ವವನ್ನು ಪ್ರವೇಶಿಸುವಂತೆ, ಏಕಾತ್ಮನು ಸರ್ವವನ್ನೂ ಅನಂತವಾಗಿ ವ್ಯಾಪಿಸಿ ಮತ್ತೂ ಉಳಿದಿರುತ್ತಾನೆ." [**ನೋಡಿ: ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ। ಏಕಸ್ತಥಾ ಸರ್ವ ಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ (ಕಠ ೨.೫.೯)** ] ವಿಜ್ಞಾನವು ಈಗ ಕಾರ್ಯಕ್ಷೇತ್ರದಲ್ಲಿ ಮುಂದುವರೆಯುತ್ತಿದೆಯೇ ಹೊರತು ಕಾರಣಕ್ಷೇತ್ರಕ್ಕೆ ಕಾಲಿಟ್ಟಿಲ್ಲ. ಹೀಗಾಗಿ ವಿಜ್ಞಾನಕ್ಕೆ ಆಧ್ಯಾತ್ಮದ ಆವಶ್ಯಕತೆಯಿದೆ. ಯಾವ ಇಂದಿನ ಕ್ವಾಂಟಮ್ ಭೌತಶಾಸ್ತ್ರ ವಿಭಾಗವು ಒಂದು ಸಾಮಾನ್ಯ ಕಣದಿಂದ ಎಲ್ಲವೂ (ಭೌತಿಕ, ಮಾನಸಿಕ, ಆಧ್ಯಾತ್ಮಿಕ) ಉಂಟಾಗಿದೆಯೆಂದು ಪ್ರತಿಪಾದಿಸುತ್ತಿದೆಯೋ, ಅದನ್ನು ಸ್ವಾಮಿ ವಿವೇಕಾನಂದರು ಬಹಳ ಹಿಂದೆಯೇ ಈ ಮಾತುಗಳಲ್ಲಿ ಹೇಳಿಬಿಟ್ಟಿದ್ದರು: "ಶಕ್ತಿ ಮತ್ತು ದ್ರವ್ಯಗಳು ಕೇವಲ ಪರಸ್ಪರ ರೂಪಾಂತರಗಳು, ಅಷ್ಟೇ. ಇಡೀ ವಿಶ್ವವೇ ಒಂದು ಸಮುದ್ರವಾದರೆ, ನಾವೆಲ್ಲ ಅದರಲ್ಲಿರುವ ಅನೇಕ ಸುಳಿಗಳು. ಅಷ್ಟೇ ಅಲ್ಲ, ಸೂರ್ಯ, ಚಂದ್ರರೇ ಮುಂತಾದ ನಕ್ಷತ್ರ ಗ್ರಹಗಳೂ ಸಹ ಈ ಅಗಾಧ ದ್ರವ್ಯರಾಶಿಗಳಲ್ಲಿ ಒಂದು ದೊಡ್ಡ ಸುಳಿ ಮಾತ್ರ. ಎಲ್ಲ ವಸ್ತುಗಳೂ ಇತರ ಎಲ್ಲ ವಸ್ತುಗಳಲ್ಲಿಯೂ ನುಗ್ಗಿ ಹೊರಚಿಮ್ಮುತ್ತಿವೆ." ಎಲ್ಲವೂ ಎಲ್ಲದರಲ್ಲಿಯೂ ಓತಪ್ರೋತವಾಗಿರುವುದರಿಂದ ಯಾವುದೂ ಬೇರೆಯಲ್ಲ, ಎಲ್ಲವೂ ಒಂದೇ ತತ್ತ್ವ. ಭೌತಿಕ ತರಂಗ, ಆಲೋಚನಾ ತರಂಗ, ವಿದ್ಯುತ್ ತರಂಗ ಎಂಬ ಯಾವ ಭೇದವಿಲ್ಲದೆ, ಎಲ್ಲವೂ ಒಂದೇ ವಸ್ತು. ಬೇರೆ ಬೇರೆಯಾಗಿ ತೋರುತ್ತಿರುವುದೆಲ್ಲವೂ ಒಂದೇ ಚೇತನದ ಆವಿರ್ಭಾವ ಮಾತ್ರ. ಹೀಗೆ ಸ್ವಾಮೀಜಿ ವಿಜ್ಞಾನ ಮತ್ತು ವೇದಾಂತ ತತ್ತ್ವಗಳ ಸಾಮರಸ್ಯವನ್ನು ಸಾಧಿಸಿ ತೋರಿಸುತ್ತಾರೆ.

ಸ್ವಾಮೀಜಿಯವರು ವಿಜ್ಞಾನಿಗಳನ್ನು ಭೇಟಿಯಾಗಲು ಅತ್ಯಂತ ಉತ್ಸಾಹವನ್ನು ತೋರಿಸುತ್ತಿದ್ದರು; ಅಂದಿನ ಶ್ರೇಷ್ಠ ಎಲೆಕ್ಟ್ರಿಕಲ್ ವಿಜ್ಞಾನಿಯಾದ ನಿಕೋಲ ಟೆಸ್ಲಾನನ್ನು ಭೇಟಿಯಾಗಿ ಸಾಂಖ್ಯ, ವೇದಾಂತಗಳ ಜ್ಞಾನಭಂಡಾರವನ್ನೇ ಅವನ ಮುಂದೆ ಚೆಲ್ಲಿದರು. ಶಕ್ತಿ ಮತ್ತು ದ್ರವ್ಯಗಳಲ್ಲಿರುವ ಅಭೇದವನ್ನು ಸ್ವಾಮೀಜಿ ಅವನಿಗೆ ವಿವರಿಸಿದರು. ರಾಜಯೋಗದಲ್ಲಿ ಬೋಧಿಸುವ ಪ್ರಾಣದ ಬಗ್ಗೆ ತಿಳಿಹೇಳಿ, ಶಕ್ತಿಸಂವಹನೆಗಾಗಿ ಪ್ರಕೃತಿ ಯಾವುದೇ ಮಾಧ್ಯಮವನ್ನು ಉಪಯೋಗಿಸುವುದಿಲ್ಲ ಎಂಬುದನ್ನು ಸ್ವಾಮೀಜಿ ಟೆಸ್ಲಾನಿಗೆ ಎತ್ತಿತೋರಿಸಿದರು. ಸ್ವಾಮೀಜಿಯ ಅಗಾಧ ಪಾಂಡಿತ್ಯ ಮತ್ತು ವೈಜ್ಞಾನಿಕ ವಿಶ್ಲೇಷಣೆಗೆ ಮಾರುಹೋದ ಟೆಸ್ಲಾ, ಅವರ ವೇದಾಂತ ಭಾಷಣವನ್ನು ಕೇಳಿ ಹೀಗೆ ನುಡಿದ : "ವೇದಾಂತ ಭಾವನೆಗಳು ತುಂಬಾ ವೈಜ್ಞಾನಿಕ. ಈ ಯುಗದ ಆಶೋತ್ತರಗಳೊಂದಿಗೆ ಮತ್ತು ಆಧುನಿಕ ವಿಜ್ಞಾನದ ತೀರ್ಮಾನಗಳೊಂದಿಗೆ ಅವು ಚೆನ್ನಾಗಿ ಹೊಂದಿಕೆಯಾಗುತ್ತವೆ." ಇದಲ್ಲದೆ ಟೆಸ್ಲಾ, ಸ್ವಾಮೀಜಿ ತನಗೆ ವಿವರಿಸಿ ತಿಳಿಸಿದ ಆಕಾಶ ಮತ್ತು ಪ್ರಾಣದ ಕುರಿತಾಗಿ ಸಂಶೋಧನೆ ಮಾಡುವುದಾಗಿಯೂ ಮತ್ತು ಅದಕ್ಕೆ ಪೂರಕವಾದ ಗಣಿತ ಸೂತ್ರವನ್ನು ತಾನು ಕಂಡುಹಿಡಿಯುವುದಾಗಿಯೂ ತಿಳಿಸಿದನು. ತತ್ಫಲವಾಗಿ ತಂತಿಯ ಸಹಾಯವಿಲ್ಲದೆ ವಿದ್ಯುತ್ ಪ್ರಸಾರದ (wireless transmission of electricity) ತಂತ್ರಜ್ಞಾನವನ್ನು ಅವನು ಕಂಡುಹಿಡಿದನು. ಮುಂದೆ ಅವನು ರಾಜಯೋಗದಲ್ಲಿ ಆಸಕ್ತಿ ಹೊಂದಿ, ಅದರಿಂದ ಸಾಕಷ್ಟು ಲಾಭವನ್ನು ಕೂಡ ಪಡೆದನು.

ಸ್ವಾಮೀಜಿಯ ವಿಜ್ಞಾನದ ಪ್ರೀತಿ ಕೇವಲ ಸತ್ಯಾವಲೋಕನಕ್ಕಷ್ಟೇ ಅಲ್ಲದೆ, ಮಾನವಕಲ್ಯಾಣಕ್ಕೂ ವಿಸ್ತರಿಸಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಸಾರ್ವತ್ರಿಕ ವಿದ್ಯಾಭ್ಯಾಸ, ಸಾಮಾಜಿಕ ಸುಧಾರಣೆ, ಆರ್ಥಿಕ ಉನ್ನತಿ, ಸೌಕರ್ಯಾಭಿವೃದ್ಧಿ, ದೀನ ದಲಿತರ ಸೇವೆ ಮುಂತಾದ ಕಾರ್ಯಗಳು ಇನ್ನೂ ಉತ್ತಮವಾಗಿ ನಿರ್ವಹಿಸಲು ಸಾಧ್ಯವೆಂಬುದನ್ನು ಅವರು ಮನಗಂಡಿದ್ದರು. ವಿಜ್ಞಾನವು ಭೌತಿಕ ಸವಲತ್ತುಗಳನ್ನು ತಂದುಕೊಡುವುದು; ಮೂಢನಂಬಿಕೆಯನ್ನು ಕಿತ್ತೊಗೆಯುವುದು; ಇದಲ್ಲದೆ, ಜನರಲ್ಲಿನ ಕೀಳರಿಮೆಯನ್ನು ತೊಲಗಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಧಾರ್ಮಿಕ ಪ್ರಜ್ಞೆಯನ್ನು ವಿಸ್ತಾರಗೊಳಿಸುವುದು ಎಂಬುದನ್ನು ಸ್ವಾಮೀಜಿ ಮನಗಂಡಿದ್ದರು. ವೈಜ್ಞಾನಿಕ ಸಂಶೋಧನೆ, ತಾಂತ್ರಿಕತೆ ಮತ್ತು ಕಾರ್ಖಾನೆಗಳನ್ನು ಭಾರತಕ್ಕೆ ತರಲು ಅವರು ಅತ್ಯಂತ ಕಾತರರಾಗಿದ್ದರು. ಸಂಶೋಧನಾ ಸೌಕರ್ಯಗಳು, ತಾಂತ್ರಿಕವಿಜ್ಞಾನ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಭಾರತದೆಲ್ಲೆಡೆ ಸ್ಥಾಪನೆಯಾಗಬೇಕೆಂದು ಅವರು ಆಶಿಸಿದ್ದರು. ಧಾರ್ಮಿಕ ಸಿದ್ಧಾಂತಗಳ ಶಾಖೆಯೂ ಇವುಗಳೊಡನೆ ಜೊತೆ ಜೊತೆಗೇ ಇರಬೇಕೆಂದು ಅವರು ಬಯಸಿದ್ದರು.

ವಿಜ್ಞಾನದ ಸಾರ್ಥಕತೆ ಇರುವುದು – ಪ್ರತಿಯೊಬ್ಬ ಮಾನವನ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾದ ಸುಭದ್ರವಾದ ವಾತಾವರಣವನ್ನು ಕಲ್ಪಿಸಿಕೊಟ್ಟು, ಮಾನವಜೀವನದ ಚರಮ ಉದ್ದೇಶವಾದ ಪರಮಾರ್ಥ ಜ್ಞಾನವನ್ನು ಪಡೆಯಲು ನೆರವಾಗುವುದರಲ್ಲಿ ಮಾತ್ರ. ಇಲ್ಲದಿದ್ದಲ್ಲಿ ಅದು ಹೆಚ್ಚಿನ ಭೋಗವನ್ನು ತಂದುಕೊಟ್ಟು, ನೈತಿಕ ಮೌಲ್ಯಗಳ ಕುಸಿತಕ್ಕೆ ಕಾರಣವಾಗುತ್ತದೆ; ಆ ಮೂಲಕ ಮಾನವನ ಅವನತಿಗೂ, ವಿಶ್ವ ಅಶಾಂತಿಗೂ ಕಾರಣವಾಗುತ್ತದೆ. ಇದನ್ನು ಬಹು ಹಿಂದೆಯೇ ಸ್ವಾಮೀಜಿ ಮನಗಂಡಿದ್ದರು. ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆಯ ಕೊಡುಗೆಗಳಾದ ಭೋಗವಸ್ತುಗಳು ಮತ್ತು ಭೌತಿಕ ಸೌಕರ್ಯಗಳಿಂದ ಜನರು ಹೆಚ್ಚು ಹೆಚ್ಚು ಶಾರೀರಿಕ ಮತ್ತು ಇಂದ್ರಿಯ ಭೋಗಗಳ ದಾಸರಾಗುತ್ತಿದ್ದಾರೆ, ತಮೋಮಯಿಗಳಾಗುತ್ತಿದ್ದಾರೆ; ಅನಿಯಂತ್ರಿತ ಇಂದ್ರಿಯಗಳಿಂದ ಅವರ ಮನಸ್ಸು ದುರ್ಬಲವಾಗಿಬಿಟ್ಟಿದೆ. ಈ ದುರ್ಬಲ ಮನಸ್ಸಿನಿಂದ ವಿಷಯಚಿಂತೆಗಳ ವಶರಾಗಿರುವುದರಿಂದ ವೈಯಕ್ತಿಕ ಹಾಗೂ ಸಾಮಾಜಿಕ ಸ್ತರಗಳಲ್ಲಿ ನೈತಿಕ ಅವನತಿಯುಂಟಾಗುತ್ತಿದೆ. ಅರ್ಥ–ಕಾಮಗಳಿಗೇ ಮಹತ್ತ್ವವನ್ನು ನೀಡಿ ಧರ್ಮ–ಮೋಕ್ಷಗಳನ್ನು ಕಡೆಗಣಿಸಲಾಗುತ್ತಿದೆ. ನೈತಿಕ – ಆಧ್ಯಾತ್ಮಿಕ ತಳಹದಿಯಿಲ್ಲದೆ ಮಾನವ ಏಳ್ಗೆಯು ಅಪೂರ್ಣ ಮತ್ತು ಅಸಾಧ್ಯ. ಇಂತಹ ಜೀವನವು ಇಹ ಪರಗಳೆರಡನ್ನೂ ನಷ್ಟಮಾಡುತ್ತದೆ. ವಿಜ್ಞಾನಕ್ಕಾಗಿ ಇಷ್ಟೊಂದು ಶ್ರಮಿಸಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಅನೇಕ ವಿಜ್ಞಾನಿಗಳ, ಸಂಶೋಧಕರ ಶ್ರಮವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದರೆ, ನಾವು ವಿವೇಕಾನಂದರ ಉಪದೇಶಗಳನ್ನು ಸರಿಯಾಗಿ ತಿಳಿದು ಅದರ ಅನುಷ್ಠಾನವನ್ನು ಮಾಡಬೇಕು. ಇದು ವಿಜ್ಞಾನಕ್ಕೂ ಶುಭಕರವಾದುದು; ಧರ್ಮಕ್ಕೂ ಒಳ್ಳೆಯದು.


With Best Compliments from:
City Central Hospital P.Ltd.,
#17, Akkamahadevi Road,
P.J.Extension,
Davanagere-577 002


ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆಯ ಶುಭಾಶಯಗಳು
VIDYASAGAR HONNUR RESIDENTIAL SCHOOL
DAVANAGERE
CONTACT ADDRESS:
#1693, K.B.Extn,
Davanagere-02
Mob: 9060458833
Mail: vidyaoasisdvg@gmail.com

# ಸ್ವಾಮಿ ವಿವೇಕಾನಂದರ ಸಂಭಾಷಣೆಗಳ ಸ್ವಾರಸ್ಯ



✱ ಸ್ವಾಮಿ ಗಿರಿಜಾತ್ಮಾನಂದ

**ಸ್ವಾಮಿ ವಿವೇಕಾನಂದರು ಅಪ್ರತಿಮ ವಿದ್ವಾಂಸರಾಗಿದ್ದರಲ್ಲದೆ, ಮನೋಹರ ಸಂಭಾಷಣಕಾರರೂ ಆಗಿದ್ದರು. ಬಾಲ್ಯದಿಂದಲೇ ಅವರ ಸಂಭಾಷಣಾ ಚಾತುರ್ಯವನ್ನು ನೋಡಬಹುದು. ಅವರ ಜೀವನದಲ್ಲಿ ಬರುವ ಕೆಲವು ಅಪೂರ್ವ ಸಂಭಾಷಣೆಗಳ ರಸನಿಮಿಷಗಳ ಸವಿದೂಟವನ್ನು ಸ್ವಾರಸ್ಯಕರವಾಗಿ ನಮಗೆ ಉಣಬಡಿಸಿರುವ ಪೂಜ್ಯ ಸ್ವಾಮೀಜಿಯವರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಬರಹಗಾರರಾದ ಇವರು ಕವಿಗಳೂ ಹೌದು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

ಸ್ವಾಮಿ ವಿವೇಕಾನಂದರು ತಮ್ಮ ಶಕ್ತಿಪೂರ್ಣವೂ, ವಿವೇಕ ಯುತವೂ ಆದ ಮಾತುಗಳಿಂದ ಇಡೀ ಜಗತ್ತನ್ನೇ ಜಯಿಸಿ ಬಂದರು. ಅವರ ಮಾತುಗಳು ನೇರ, ಸ್ಪಷ್ಟ ಮತ್ತು ಅತ್ಯಂತ ಪ್ರಭಾವ ಶಾಲಿಯಾಗಿದ್ದವು. ಅವರ ಮಾತುಗಳ ಮೋಹಕತೆಗೆ ಆಕರ್ಷಕ ರಾಗದವರೇ ಇರಲಿಲ್ಲವೆನ್ನಬೇಕು. ರಾಜರು, ದಿವಾನರು, ಸಮಾಜದ ಧುರೀಣರು ಸ್ವಾಮೀಜಿಯವರ ವಿಚಾರಧಾರೆಗೆ ಒಲಿದು ಅವರ ಅನುಯಾಯಿಗಳಾಗುತ್ತಿದ್ದರು. ತದನಂತರ ಅವರ ಕೈಕೆಳಗಿನ ಅಧಿಕಾರಿಗಳು, ಜನಸಾಮಾನ್ಯರೂ ಅವರೆಡೆಗೆ ಧಾವಿಸಿ ಬರುತ್ತಿದ್ದರು. ಅಲ್ಲಿ ತಮ್ಮೆಲ್ಲ ಧಾರ್ಮಿಕ, ಲೌಕಿಕ ಪ್ರಶ್ನೆಗಳಿಗೆ ಉತ್ತರವನ್ನು ಪಡೆದುಕೊಂಡು ಜೀವನದ ಸಾರ್ಥಕತೆಯನ್ನು ಸಾಧಿಸಿಕೊಳ್ಳುತ್ತಿದ್ದರು.


"ಬೆಳೆಯುವ ಪೈರು ಮೊಳಕೆಯಲ್ಲಿಯೇ" ಎಂಬಂತೆ ಸ್ವಾಮಿ ವಿವೇಕಾನಂದರ ವಾಕ್ಪಟುತ್ವದ ಎಲ್ಲ ಲಕ್ಷಣಗಳೂ ಅವರ ಬಾಲ್ಯ ಕಾಲದಿಂದಲೂ ಪ್ರಕಟಗೊಂಡಿದ್ದವು. ಕಾಲೇಜು ವಿದ್ಯಾರ್ಥಿಯಾದ ನರೇಂದ್ರನು ಆಗಿನ್ನೂ ಹೊಸದಾಗಿ ದಕ್ಷಿಣೇಶ್ವರಕ್ಕೆ ಬರಲು ಪ್ರಾರಂಭಿಸಿದ್ದ ಕಾಲವದು. ಮಹೇಂದ್ರನಾಥ ಗುಪ್ತನೂ ಶ್ರೀರಾಮಕೃಷ್ಣರ ಭಕ್ತಸಮೂಹಕ್ಕೆ ಹೊಸಬ. ಮಹೇಂದ್ರನಾಥ ತನ್ನ ದಿನಚರಿಯಲ್ಲಿ ಹೀಗೆ ದಾಖಲಿಸಿದ್ದಾನೆ: ಪರಮಹಂಸರು ಹತ್ತೊಂಬತ್ತು ವಯಸ್ಸಿನ ಒಬ್ಬ ಹುಡುಗನೊಂದಿಗೆ ಆತನ ಕಡೆಗೆ ಬಾಗಿ ಆನಂದದಿಂದ ಏನನ್ನೋ ಮಾತುಕತೆಯಾಡುತ್ತಿದ್ದಾರೆ. ಆತನ ಹೆಸರು 'ನರೇಂದ್ರ'; ಅವನು ಕಾಲೇಜಿನಲ್ಲಿ ಓದುತ್ತಿದ್ದಾನೆ, ಸಾಧಾರಣ ಬ್ರಹ್ಮಸಮಾಜಕ್ಕೆ ಹೋಗಿ ಬರುತ್ತಿದ್ದಾನೆ. ಆತನ ಮಾತುಕತೆಗಳು ತೇಜಃಪುಂಜವಾಗಿವೆ; ಕಣ್ಣು ಉಜ್ವಲವಾಗಿವೆ; ಭಕ್ತನ ಅವಲೋಕನ.

ಶ್ರೀರಾಮಕೃಷ್ಣರು ನರೇಂದ್ರನಿಗೆ, "ನರೇಂದ್ರ, ನೀನು ಏನು ಹೇಳುತ್ತೀಯೇ? ಪ್ರಾಪಂಚಿಕರು ಎಷ್ಟೊಂದು ಆಡಿಕೊಳ್ಳುತ್ತಾರೆ ಏನು ಕತೆ! ಆದರೆ ನೋಡು. ದಾರಿಯಲ್ಲಿ ಆನೆ ನಡೆದು ಹೋಗುವಾಗ ಅದರ ಹಿಂದೆ ನಾಯಿಗಳು ಎಷ್ಟೊಂದು ಚೀತ್ಕಾರ ಮಾಡುತ್ತವೆ; ಆದರೂ ಅದು ಮಾತ್ರ ಹಿಂದಿರುಗಿ ನೋಡುವುದೇ ಇಲ್ಲ. ನಿನ್ನನ್ನೂ ಯಾರಾದರೂ ನಿಂದಿಸಿದರೆ ನಿನಗೇನೆನಿಸುತ್ತದೆ?"

**ನರೇಂದ್ರ :** "ನಾನು ಭಾವಿಸುತ್ತೇನೆ, ನಾಯಿ 'ಬೋವ್ ಬೋವ್!" ಅನ್ನುತ್ತಿದೆ ಅಂತ."

ಶ್ರೀರಾಮಕೃಷ್ಣರು ನಗುತ್ತ, "ಬೇಡಪ್ಪಾ ಬೇಡ. ಅಷ್ಟು ದೂರ ಹೋಗಬೇಡ! ಭಗವಂತನೇ ಸರ್ವಭೂತಗಳಲ್ಲಿಯೂ ಇದ್ದಾನೆ. ಆದರೆ ನೀನು ಒಳ್ಳೆಯವರೊಂದಿಗೆ ಹೆಚ್ಚಾಗಿ ಬೆರೆಯಬೇಕು. ಕೆಟ್ಟವರೊಂದಿಗೆ ಬಹಳ ದೂರದಲ್ಲಿಯೇ ಇರಬೇಕು. ಹುಲಿಯಲ್ಲಿಯೂ ಭಗವಂತನಿದ್ದಾನೆ. ಆದರೆ ಅದನ್ನು ಆಲಿಂಗನ ಮಾಡಿಕೊಳ್ಳಲಾಗುವುದಿಲ್ಲ!"

ಹಗಲಿರುಳೂ ಭಗವದ್ಭಾವದಲ್ಲಿಯೇ ನೆಲೆಸಿದ್ದ ಶ್ರೀರಾಮಕೃಷ್ಣರ ಮನಸ್ಸು, ಸಾತ್ತ್ವಿಕ ಭಕ್ತರ ಸಂಗಕ್ಕಾಗಿ ಹಂಬಲಿಸುತ್ತಿತ್ತು. ನರೇಂದ್ರನೇ ಮೊದಲಾದ ನವ ಯುವಕರು, ಮಹೇಂದ್ರನಾಥ ಗುಪ್ತನೇ ಮೊದಲಾದ ಗೃಹೀಭಕ್ತರು ಅವರ ಪ್ರೇಮಮಯ ವ್ಯಕ್ತಿತ್ವಕ್ಕೆ ಒಲಿದು ಅವರೆಡೆಗೆ ಬರಲಾರಂಭಿಸಿದರು. ಶ್ರೀರಾಮಕೃಷ್ಣರು ತಮ್ಮಲ್ಲಿಗೆ ಬರುತ್ತಿರುವ ಪ್ರತಿಯೊಬ್ಬ ವ್ಯಕ್ತಿಯ ಜನ್ಮಾಂತರದ ವಿವರಗಳನ್ನೆಲ್ಲ ತಮ್ಮ ಯೋಗದೃಷ್ಟಿಯಿಂದ ತಿಳಿದಿದ್ದರು. ತಮ್ಮ ಕೊಠಡಿಯಲ್ಲಿ ಕುಳಿತಿದ್ದ ಭಕ್ತರ ಮುಂದೆ ನರೇಂದ್ರನನ್ನು ತೋರಿಸಿ ಪರಮಹಂಸರು ಹೇಳುತ್ತಿದ್ದಾರೆ, "ಈ ಹುಡುಗ ನಿಮಗೆ ಗೊತ್ತಿದೆ. ಇಲ್ಲಿ ಹೀಗೆ ವರ್ತಿಸುತ್ತಿದ್ದಾನೆ. ತುಂಟ ಹುಡುಗ. ತಂದೆಯ ಬಳಿ ಬಹಳ ಸಾಧುಪ್ರಾಣಿ; ಜಗುಲಿ ಮೇಲೆ ಆಟವಾಡುವಾಗ ಬೇರೆಯೆ ಮೂರ್ತಿ. ಇವರು ನಿತ್ಯಸಿದ್ಧರ ಗುಂಪಿಗೆ ಸೇರಿದವರು. ಎಂದಿಗೂ ಸಂಸಾರದ ಬಲೆಗೆ ಬೀಳರು. ಸ್ವಲ್ಪ ವಯಸ್ಸಾಗುವುದರೊಳಗೇ ಎಚ್ಚೆತ್ತುಕೊಂಡು ಬಿಡುತ್ತಾರೆ. ನೇರವಾಗಿ ಭಗವಂತನ ಕಡೆಗೆ ಮುಂದುವರಿದು ಬಿಡುತ್ತಾರೆ. ಇವರು ಈ ಜಗತ್ತಿನಲ್ಲಿ ಜನ್ಮತಾಳಿರುವುದು



ಲೋಕಶಿಕ್ಷಣಕ್ಕಾಗಿ. ಇವರಿಗೆ ಈ ಜಗತ್ತಿನದು ಯಾವುದೂ ರುಚಿಸದು. ಕಾಮಕಾಂಚನದಲ್ಲಿ ಎಂದಿಗೂ ಆಸಕ್ತರಾಗರು."

ಈ ಬಗೆಯ ಹೊಗಳಿಕೆಯ ಮಾತುಗಳನ್ನು ಕೇಳಿ ನರೇಂದ್ರನು ಕೊಠಡಿಯಿಂದ ಎದ್ದು ಹೊರಕ್ಕೆ ಹೊರಟುಹೋದ.

ಶ್ರೀರಾಮಕೃಷ್ಣರು ತಮ್ಮ ಮಾತುಗಳನ್ನು ಮುಂದುವರೆಸಿ ಹೇಳಿದರು, "ನೋಡಿ, ನರೇಂದ್ರ ಹಾಡುವುದರಲ್ಲಿ, ಬಾಜಿಸುವುದರಲ್ಲಿ, ಓದುವುದರಲ್ಲಿ ಎಲ್ಲದರಲ್ಲೂ ನಿಪುಣ. ಅಂದು ಕೇದಾರನೊಂದಿಗೆ ತರ್ಕ ಮಾಡುತ್ತಿದ್ದ. ಆತನ ಮಾತುಕತೆಗಳನ್ನು 'ಕಚ್, ಕಚ್' ಅಂತ ತುಂಡರಿಸಿಬಿಟ್ಟ."

ಸ್ವತಃ ಶ್ರೀರಾಮಕೃಷ್ಣರು ನರೇಂದ್ರನ ಸಹವಾಸವನ್ನು ಬಹಳವಾಗಿ ಇಷ್ಟಪಡುತ್ತಿದ್ದರು. ಆತನ ಸಂಭಾಷಣೆಯನ್ನು ಕೇಳಲು ಉತ್ಸುಕರಾಗಿರುತ್ತಿದ್ದರು. ನರೇಂದ್ರನ ಬೌದ್ಧಿಕ ಶಕ್ತಿಯ ಸಾಮರ್ಥ್ಯವನ್ನು ಕಂಡು ಆನಂದಿಸುವ ಉದ್ದೇಶದಿಂದ, ಶ್ರೀರಾಮಕೃಷ್ಣರೇ ಸ್ವತಃ ಅವನನ್ನು ತಮ್ಮ ಕೆಲವು ಮೇಧಾವಿ ಭಕ್ತರೊಂದಿಗೆ ಸಂಭಾಷಿಸಲು ತಿಳಿಸುತ್ತಿದ್ದರು. ಪ್ರಸಿದ್ಧ ನಾಟಕಕಾರನಾಗಿದ್ದ ಗಿರೀಶಚಂದ್ರ ಘೋಷನೊಂದಿಗೆ ಇಂಗ್ಲಿಷ್ ಭಾಷೆಯಲ್ಲಿ ಸಂಭಾಷಿಸಲು ತಿಳಿಸುತ್ತಿದ್ದರು. ಮತ್ತೆ ಕೆಲವು ವೇಳೆ ಅಧ್ಯಾಪಕನಾಗಿದ್ದ ಮಹೇಂದ್ರನಾಥ ಗುಪ್ತನೊಂದಿಗೆ ಮಾತುಕತೆಯಲ್ಲಿ ತೊಡಗಿಸುತ್ತಿದ್ದರು. ನರೇಂದ್ರನು ಇವರೆಲ್ಲರೊಂದಿಗೆ ನಿರರ್ಗಳವಾಗಿ ವಾದಿಸಲು ಸಮರ್ಥನಾಗಿದ್ದ.

ಮತ್ತೊಮ್ಮೆ ಭಕ್ತರ ಮುಂದೆ ನರೇಂದ್ರನ ಸಂಬಂಧವಾಗಿ ತಿಳಿಸುತ್ತಾ ಶ್ರೀರಾಮಕೃಷ್ಣರೆನ್ನುತ್ತಾರೆ, "ನರೇಂದ್ರನ ಕಡೆ ನೋಡು, ಆತ ಯಾರನ್ನೂ ಕೇರ್ (ಲಕ್ಷ್ಯ) ಮಾಡುವುದೇ ಇಲ್ಲ. ಆತ ನನ್ನನ್ನೂ ಲಕ್ಷ್ಯ ಮಾಡುವುದೇ ಇಲ್ಲ! ನಾನು ಆತನನ್ನು ಎಲ್ಲರ ಮುಂದೆಯೂ ಹೊಗಳಿಬಿಡಬಹುದೆಂದು ಹೆದರಿ, ತನಗೆ ಗೊತ್ತಿರುವುದನ್ನೆಲ್ಲಾ ನನ್ನೆದುರಿಗೆ ಪ್ರದರ್ಶಿಸುತ್ತಿಲ್ಲ. ಆತ ಮಾಯಾ ಮೋಹಗಳಿಂದ ನಿವೃತ್ತನಾಗಿದ್ದಾನೆ. ಆತನಿಗೆ ಯಾವ ಬಂಧನವೂ ಇಲ್ಲ. ಒಳ್ಳೆ ಪಾತ್ರ, ಅನೇಕ ಒಳ್ಳೆಯ ಗುಣಗಳಿವೆ. ಹಾಡುವುದರಲ್ಲಿ, ಬಾಜಿಸುವುದರಲ್ಲಿ ಒಳ್ಳೇ ನಿಪುಣ. ಜಿತೇಂದ್ರಿಯ ಬೇರೆ."

ಒಮ್ಮೆ ನರೇಂದ್ರ ಹಾಜರಾ ಮಹಾಶಯನೊಂದಿಗೆ ಮಾತುಕತೆಯಾಡುತ್ತಾ ಕುಳಿತಿದ್ದ. ಹಾಜರಾ ಸಾಧುವಿನಂತೆ ನಟನೆ ಮಾಡುತ್ತಾ ದಕ್ಷಿಣೇಶ್ವರದಲ್ಲಿ ವಾಸವಾಗಿದ್ದ. ಸದಾ ಕಾಲವೂ ಶುಷ್ಕಜ್ಞಾನ ವಿಚಾರದಲ್ಲಿ ತೊಡಗಿರುತ್ತಿದ್ದ. ಆತ ಹೀಗೆ ಹೇಳುತ್ತಿದ್ದ, "ಈ ಜಗತ್ತು ಸ್ವಪ್ನದ ಹಾಗೆ ಅನಿತ್ಯ. ಪೂಜೆ ನೈವೇದ್ಯ ಇವೆಲ್ಲ ಮಾನಸಿಕ ಭ್ರಮೆಯಷ್ಟೆ. ಸ್ವಸ್ವರೂಪಧ್ಯಾನವೇ ಜೀವನದ ಉದ್ದೇಶ."

ಮತ್ತೆ ಹೇಳುತ್ತಿದ್ದ, "ಅಹಂ ಬ್ರಹ್ಮಾಸ್ಮಿ" ಅಂದರೆ ನಾನೇ ಅವನು ಎಂಬುದಾಗಿ. ಆತ ಅತ್ಯಂತ ಉನ್ನತ ಭಾವದ ಬೋಧನೆ ಮಾಡುತ್ತಿದ್ದರೂ ಹಣ, ಮಾನ, ಸಂಭ್ರಮ ಇವುಗಳ ಕಡೆಗೇ ದೃಷ್ಟಿಯಿಟ್ಟಿದ್ದ.

ಶ್ರೀರಾಮಕೃಷ್ಣರು ತಮ್ಮ ಕೊಠಡಿಯಿಂದ ಎದ್ದು ಇವರಿರುವಲ್ಲಿಗೆ ಬಂದು ಕೇಳಿದರು, "ಏನು ಸಮಾಚಾರ, ಏನು ಮಾತನಾಡುತ್ತಿದ್ದೀರಿ?"

ನರೇಂದ್ರ ನಗುತ್ತ, "ನಾವು ಏನೇನೋ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದ್ದೇವೆ. ಅವು ಸಾಮಾನ್ಯರಿಗೆ ಅರ್ಥವಾಗುವಂತಿಲ್ಲ!"

ಶ್ರೀರಾಮಕೃಷ್ಣರು ನಗುತ್ತಾ, "ನೋಡು. ಶುದ್ಧ ಜ್ಞಾನ, ಶುದ್ಧಭಕ್ತಿ ಎರಡೂ ಒಂದೇ. ಭಕ್ತಿಮಾರ್ಗ ಬಹಳ ಸುಲಭ ಮಾರ್ಗ."

ನಂತರ ನರೇಂದ್ರ ಶ್ರೀರಾಮಕೃಷ್ಣರ ಮಾತುಗಳನ್ನು ಒಪ್ಪಿಕೊಳ್ಳುವಂತೆ ಒಂದು ಭಕ್ತಿಪೂರ್ಣವಾದ ಹಾಡನ್ನು ಹಾಡಿದ, "ನನ್ನನ್ನೂ ಉನ್ಮತ್ತನನ್ನಾಗಿಸೆಲೆ ತಾಯೆ, ನಿನ್ನ ಭಕ್ತಿಯ ಮಧುರ ಮಧುಪಾನದಿಂದ."

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಪರಿವ್ರಾಜಕ ಸಂನ್ಯಾಸಿಯಾಗಿ ಸಂಚರಿಸುತ್ತಾ, ಸ್ವಾಮಿ ವಿವೇಕಾನಂದರು ವಾರಾಣಸಿಗೆ ಬಂದಿದ್ದರು. ಅಲ್ಲಿ ಭೂದೇವ ಮುಖ್ಯೋಪಾಧ್ಯಾಯರೆಂಬ ಪಂಡಿತರೊಂದಿಗೆ ಹಿಂದೂಧರ್ಮದ ಆದರ್ಶಗಳ ಕುರಿತು ಸುದೀರ್ಘವಾದ ಸಂಭಾಷಣೆಗಳನ್ನು ನಡೆಸಿದರು. ಮುಂದೆ ಈ ಪಂಡಿತರು ಉದ್ಗರಿಸುತ್ತಾರೆ: "ಅದ್ಭುತ! ಇಷ್ಟು ಸಣ್ಣ ವಯಸ್ಸಿನಲ್ಲಿಯೇ ಅದೆಷ್ಟು ವಿಶಾಲ ಅನುಭವ, ಎಂಥ ತೀಕ್ಷ್ಣ ಅಂತರ್‌ದೃಷ್ಟಿ ಇವರದು! ಮುಂದೆ ಇವರೊಬ್ಬ ಮಹಾನ್ ವ್ಯಕ್ತಿಯಾಗಿ ಕಂಗೊಳಿಸುವುದರಲ್ಲಿ ನನಗೆ ಯಾವುದೇ ಸಂದೇಹವೇ ಇಲ್ಲ."

ಸ್ವಾಮೀಜಿ ತಾವು ಕಾಶಿಯಲ್ಲಿರುವಾಗಲೇ ಮಹಾತಪಸ್ವಿಗಳೂ ಹಾಗೂ ವಿದ್ವಾಂಸರೆಂದು ಪ್ರಸಿದ್ಧರಾಗಿದ್ದ ಸ್ವಾಮಿ ಭಾಸ್ಕರಾನಂದರನ್ನು ಭೇಟಿ ಮಾಡಿದರು. ಕಾಮಕಾಂಚನ ತ್ಯಾಗದ ವಿಷಯವಾಗಿ ಸಂಭಾಷಣೆ ನಡೆಯುತ್ತಿದ್ದಾಗ ಸ್ವಾಮೀಜಿ ಹೇಳಿದರು, "ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಭಗವಂತನ ಸಾಕ್ಷಾತ್ಕಾರವಾಗಬೇಕಾದರೆ ಕಾಮಕಾಂಚನಗಳ ಮೇಲಿನ ಆಸಕ್ತಿಯನ್ನು ಸಂಪೂರ್ಣ ಜಯಿಸಲೇಬೇಕಾಗುತ್ತದೆ" ಎಂದು. ಆಗ ಭಾಸ್ಕರಾನಂದರು ಒಂದು ಬಗೆಯ ಅಧಿಕಾರವಾಣಿಯಿಂದ, "ಕಾಮಕಾಂಚನಗಳನ್ನು ಸಂಪೂರ್ಣವಾಗಿ ಗೆಲ್ಲಲು ಯಾರಿಂದಲೂ ಸಾಧ್ಯವಿಲ್ಲ" ಎಂದುಬಿಟ್ಟರು.

ಸ್ವಾಮೀಜಿ ಆಶ್ಚರ್ಯದಿಂದ ನುಡಿದರು, "ಸ್ವಾಮಿ! ಏನು ಹೇಳುತ್ತಿದ್ದೀರಿ ನೀವು! ಕಾಮಕಾಂಚನಗಳನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಂಡವರು ಎಷ್ಟೋ ಜನ ಇದ್ದೇ ಇದ್ದಾರೆ. ನಿಜವಾದ ಸಂನ್ಯಾಸ ಜೀವನದ ಆಧಾರವೇ ಕಾಮಕಾಂಚನ ತ್ಯಾಗವಲ್ಲವೆ! ಕಡೆಯ ಪಕ್ಷ ಅಂತಹ ಒಬ್ಬರನ್ನಾದರೂ ನಾನು ಕಣ್ಣಾರೆ ಕಂಡಿದ್ದೇನೆ." ಭಾಸ್ಕರಾನಂದರು ಮುಗುಳುನಗುತ್ತ ನುಡಿದರು, "ನೀವಿನ್ನೂ ಮಗು, ಅವೆಲ್ಲ ನಿಮಗೇನು ಗೊತ್ತಾಗುತ್ತದೆ!"

ಇಂತಹ ಅಸಡ್ಡೆಯ ಮಾತುಗಳನ್ನು ಕೇಳಿ ಸ್ವಾಮೀಜಿಯ ಮೈಬಿಸಿಯೇರಿತು. ತಕ್ಷಣ ಅವರು ತಮ್ಮ ಪ್ರಖರ ವಾಗ್ವೈಖರಿಯಿಂದ, ತೇಜಸ್ವಿಯಾದ ವಿಚಾರಧಾರೆಗಳಿಂದ, ತಮ್ಮ ಸ್ವಂತ ಅನುಭವಗಳ ಆಧಾರದಿಂದ ಸ್ವಾಮಿ ಭಾಸ್ಕರಾನಂದರ ವಾದವನ್ನು ಖಂಡಿಸಿದರು. ಸ್ವಾಮೀಜಿ ತಮ್ಮ ವಿಚಾರಧಾರೆಯನ್ನು ಮಂಡಿಸುತ್ತಿದ್ದಂತೆ ಭಾಸ್ಕರಾನಂದರೂ, ಅವರ ಅನುಯಾಯಿಗಳೂ ಸ್ತಂಭೀಭೂತರಾಗಿ ಕುಳಿತರು. ಕೊನೆಯಲ್ಲಿ ಭಾಸ್ಕರಾನಂದರು ತಮ್ಮ ಸುತ್ತ ಕುಳಿತವರತ್ತ ತಿರುಗಿ ಹೇಳಿದರು,"ಈತನ ನಾಲಗೆಯಲ್ಲಿ ಸ್ವಯಂ ವಾಗ್ದೇವಿಯೇ ನೆಲೆಸಿದ್ದಾಳೆ! ಈತನ ಬುದ್ಧಿಶಕ್ತಿ ಪ್ರಖರ ಜ್ಯೋತಿಯಂತಿದೆ!"

ಸ್ವಾಮೀಜಿಯವರು ಹತ್ರಾಸಿನಲ್ಲಿದ್ದಾಗ ಆ ಪಟ್ಟಣದಲ್ಲಿ ವಾಸವಾಗಿದ್ದ ಬಂಗಾಳಿಗಳೆಲ್ಲರೂ ಅವರನ್ನು ನೋಡಲು, ಅವರ ದಿವ್ಯವಾಣಿಯನ್ನು ಕೇಳಲು ಧಾವಿಸಿಬಂದರು. ಆ ದಿನಗಳ ಬಗ್ಗೆ ನಟಕೃಷ್ಣ ಎಂಬುವವನು ಮುಂದೊಮ್ಮೆ ಹೀಗೆ ಹೇಳುತ್ತಾನೆ: "ಸ್ವಾಮೀಜಿಯವರೊಂದಿಗೆ ನಿರಂತರ ಆಧ್ಯಾತ್ಮಿಕ ಸಂಭಾಷಣೆಯಲ್ಲಿ ಕಳೆದ ಆ ದಿನಗಳು, ನಿಜಕ್ಕೂ ನಮ್ಮ ಜೀವಮಾನದಲ್ಲೇ ಅತ್ಯಂತ ಸಾರ್ಥಕ ದಿನಗಳು. ಅವರ ಪವಿತ್ರ ಸಹವಾಸದಿಂದಾಗಿ ಆ ಊರಿನ ಬಂಗಾಳಿಗಳಲ್ಲಿದ್ದ ಒಳಜಗಳಗಳೆಲ್ಲ ತಾವೇತಾವಾಗಿ ಪರಿಹಾರವಾದವು. ನಮ್ಮ ಸಮಾಜದಲ್ಲಿ, ತಾವು ವಯೋವೃದ್ಧರೆಂದೋ, ಉನ್ನತ ಮನೆತನದವರೆಂದೋ ಹೆಮ್ಮೆಪಡುತ್ತಿದ್ದವರೂ ಕೂಡ, ಈ ತರುಣ ಸಂನ್ಯಾಸಿಯ ಮುಂದೆ ಮಕ್ಕಳಂತೆ ಕುಳಿತುಕೊಂಡು, ತಮ್ಮ ಅಧಿಕಾರಮದ, ಕುಲಮದ, ಧನಮದಗಳನ್ನೆಲ್ಲ ಮರೆತು, ಆಧ್ಯಾತ್ಮಿಕ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಸಂಜೆಯ ಹೊತ್ತಿಗೆ ಭಜನೆಯ ಕಾರ್ಯಕ್ರಮವಿರುತ್ತಿತ್ತು. ಸ್ವಾಮೀಜಿಯವರ ಮಧುರ ಕಂಠವನ್ನು ಕೇಳಿ, ಅಲ್ಲಿ ನೆರೆದಿದ್ದವರೆಲ್ಲ ಭಾವಪರವಶರಾಗುತ್ತಿದ್ದರು. ಅವರ ಕಂಠಸ್ವರವನ್ನು ಕೇಳಿದವರಿಗೆ ಇನ್ನಷ್ಟು ಕೇಳುವ ಹಂಬಲ; ಕೇಳಿದಷ್ಟೂ ತೃಪ್ತಿಯಿಲ್ಲ."

ಸಂಭಾಷಣೆಯೆಂದರೆ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವ ಮಾತುಕತೆ. ಇದು ಪ್ರಶ್ನೋತ್ತರ ರೂಪದಲ್ಲಿರಬಹುದು ಅಥವಾ ಪರಸ್ಪರ ವಿಚಾರ ವಿನಿಮಯವಾಗಿರಬಹುದು. ಪ್ರಶ್ನೋತ್ತರ ರೂಪದ ಸಂಭಾಷಣೆಯಲ್ಲಿ ಕೇಳುಗರ ಪ್ರಶ್ನೆಗೆ ತಕ್ಷಣವೇ ಉತ್ತರಿಸಬೇಕಾಗುತ್ತದೆ. ಇದರಲ್ಲಿ ಹೇಳುವವರ ಬೌದ್ಧಿಕ ಸಾಮರ್ಥ್ಯದ ನಿಜವಾದ ಪರೀಕ್ಷೆಯಾಗುತ್ತದೆ. ಸ್ವಾಮಿ ವಿವೇಕಾನಂದರು ಎಲ್ಲ ಬಗೆಯ ಸಂಭಾಷಣೆಗಳಲ್ಲೂ ನಿಷ್ಣಾತರಾಗಿದ್ದರು. ಅವರ ಸಂಭಾಷಣೆಗಳಲ್ಲಿ ರಾಜಗಾಂಭೀರ್ಯವಿದೆ, ಶಕ್ತಿಯಿದೆ, ಹಾಸ್ಯವಿದೆ, ಒಳಿತನ್ನು ಮಾಡುವ ಕಳಕಳಿಯಿದೆ. ಒಬ್ಬ ಧರ್ಮಪ್ರವರ್ತಕನಾಗಿ ಹೊರಟ ಸ್ವಾಮಿ ವಿವೇಕಾನಂದರು ಹಲವು ದೇಶಗಳ, ಹಲವು ಜನಾಂಗಗಳ, ಹಲವಾರು ಭಾಷೆಗಳ ಜನರೊಂದಿಗೆ ಹೇಗೆ ತಮ್ಮ ಉಜ್ವಲ ಆಧ್ಯಾತ್ಮಿಕ ವ್ಯಕ್ತಿತ್ವದ ಮೂಲಕ ವ್ಯವಹರಿಸಿದರು ಎಂಬುದು ರೋಮಾಂಚನಕಾರಿಯಾದುದು, ಜ್ಞಾನಪ್ರದವಾದುದು. ಕೆಲವು ಅತ್ಯಂತ ಸ್ವಾರಸ್ಯಕರವಾದ ಸಂಭಾಷಣಾ ಪ್ರಸಂಗಗಳನ್ನು ಇನ್ನು ಮುಂದೆ ನೋಡೋಣ.

ಸ್ವಾಮಿ ವಿವೇಕಾನಂದರು ಆಳ್ವಾರಿನ ರಾಜ ಮಂಗಲಸಿಂಗನೊಂದಿಗೆ ನಡೆಸಿದ ಸಂಭಾಷಣೆಯು, ಅಂದಿನ ರಾಜರುಗಳು ಹೇಗೆ ಪಾಶ್ಚಾತ್ಯರ ರೀತಿನೀತಿಗಳಿಗೆ ದಾಸರಾಗಿದ್ದರೆಂದೂ, ಹೇಗೆ ಸ್ವಾಮೀಜಿ ಅವರ ಮನಸ್ಸನ್ನು ಭಾರತದ ಹಿರಿಯ ಸಂಸ್ಕೃತಿಯತ್ತ ತಿರುಗಿಸುವಲ್ಲಿ ಸಫಲರಾದರೆಂದೂ ತಿಳಿಸಿಕೊಡುತ್ತದೆ.

**ಮಹಾರಾಜ ಮಂಗಲಸಿಂಗ್:** "ಒಳ್ಳೆಯದು ಸ್ವಾಮೀಜಿ,